ಕಳೆದ ಶತಮಾನಗಳಲ್ಲಿ ಕವಿ ಎಂದರೆ ಅವನು ಪಾಂಡಿತ್ಯ ಪ್ರದರ್ಶಕನೇ ಆಗಬೇಕಿತ್ತು. ಅಷ್ಟೆಲ್ಲ ಯಾಕೆ, ನವೋದಯ ಸಂದರ್ಭದಲ್ಲೂ ಕೂಡ ಕಾವ್ಯ ರಚನೆ ಮಾಡದ ಹೊರತು ಮಹಾಕವಿಗಳಾಗಲು ಸಾಧ್ಯವಿಲ್ಲವೆಂದು ಎಲ್ಲರೂ ಹಳಗನ್ನಡವನ್ನು ವಾಚೋವಿಧೇಯ ಓದಿಕೊಂಡವರಾಗಿ ಅದೇ ಪಾಂಡಿತ್ಯದ ಹಿನ್ನೆಲೆಯಲ್ಲಿ ಕಾವ್ಯ ನಾಟಕ, ಮಹಾಕಾವ್ಯ ಬರೆದದ್ದುಂಟು. ಇದೀಗಲೂ ಆದದೇ ವಸ್ತು ಮತ್ತು ಹಳಗನ್ನಡವೆಂಬ ಸವಕಲು ಭಾಷೆಯ ಮಹಾಕಾವ್ಯ ಬರಹದ ಪರಿಪಾಠ ಸಾಗಿಯೇ ಇದೆ.

ಹನ್ನೆರಡನೆಯ ಶತಮಾನದಲ್ಲಿ ಕಾವ್ಯ ರಚನೆಯ ಪರಂಪರೆಯನ್ನು ಮುರಿದ ವಚನಕಾರರಂತೆ ಆಧುನಿಕ ಸಂದರ್ಭಕ್ಕೆ ಹೊಂದುವುದು ಗದ್ಯ ಬರಹವೇ ಎಂಬ ಹಟದಿಂದ ಹೊರಟವರು ಶಿವರಾಮ ಕಾರಂತರು ಮಾತ್ರ. ಪಾಂಡಿತ್ಯ ಮೋಹವು ಎಲ್ಲ ಶತಮಾನಗಳಲ್ಲೂ ಇದ್ದಂತೆ ಹರಿಹರನನ್ನು ಕಾಡಿ, ಭಕ್ತಿ ಮತ್ತು ಪಾಂಡಿತ್ಯ ಪ್ರದರ್ಶನಕ್ಕಾಗಿ ಗಿರಿಜಾ ಕಲ್ಯಾಣವನ್ನು ಬರೆದ. ಬರೆದದ್ದಷ್ಟೇ ಅಲ್ಲ 'ಸೂಕ್ತಿ ಸುಧಾರ್ಣವ' ಮತ್ತು 'ಕಾವ್ಯಾದರ್ಶ' ಲಕ್ಷಣ ಗ್ರಂಥಗಳಲ್ಲಿ ಕಾಣಿಸಿಕೊಳ್ಳುವ ಮಹಾಕಾವ್ಯದ ಅಷ್ಟಾದಶ ಲಕ್ಷಣಗಳನ್ನು ಗಿರಿಜಾಕಲ್ಯಾಣದಲ್ಲಿ ತರಲು ಹೊರಟು ಅದನ್ನು ಸಂಪ್ರದಾಯಿಕ ಕಾವ್ಯಗಳ ಜಾಡಿಗೆ ತಳ್ಳಿದ. ರಗಳೆಗಳ ರಚನೆಯಲ್ಲಿ ಯಾವ ಕಾವ್ಯ ಮಾರ್ಗವನ್ನು ಲೆಕ್ಕಿಸದೇ ಅವನ್ನು ಸಹಜ ಸುಂದರಗೊಳಿಸಿದ ಹರಿಹರ ತನ್ನ ಕಾವ್ಯಾರಂಭದ ಶಕ್ತಿ ಪ್ರದರ್ಶನದಲ್ಲಿ ಗೆಲ್ಲಲು ಹೋಗಿ ಸೋಲುತ್ತಾನೆ. ಮಹಾಪ್ರಾಜ್ಞನಾದ ಕಾಳಿದಾಸ ತನ್ನ ಕುಮಾರ ಸಂಭವದ ಐದನೆಯ ಸರ್ಗದಲ್ಲಿ, ಗಿರಿಜೆಯ ತಪಸ್ಸಿಗೆ ಮೆಚ್ಚಿದ ಶಿವನಿಂದ 'ಅದ್ಯಪ್ರಭೃತ್ಯವನತಾಂಗಿ ತವಾಸ್ಮಿ ದಾಸಃ' ಎಂದು ಹೇಳಿಸುವ ಲೋಕೋತ್ತರ ಸ್ತ್ರೀ ಪಾರಮ್ಯದ ಹಾಗೂ ಪುರುಷ ವಿನಯದ ಮಾತು ಗಿರಿಜಾ ಕಲ್ಯಾಣದಲ್ಲಿ ಕಾಣಿಸುವುದಿಲ್ಲ.

ಪದ್ಮ ಪುರಾಣ, ಲಿಂಗ ಪುರಾಣ, ಸ್ಕಂದ ಪುರಾಣ, ಸೌರ ಪುರಾಣ, ಶಿವ ಪುರಾಣಗಳಲ್ಲಿ ಕಾಣಿಸಿಕೊಳ್ಳುವ ಹಿಮವಂತ, ಮೇನಾದೇವಿಯ ಮಗಳಾದ ಗಿರಿಜೆ ಶಿವನನ್ನು ಒಲಿಸಿ ವಿವಾಹವಾಗುವವಷ್ಟಕ್ಕೆ ಗಿರಿಜಾ ಕಲ್ಯಾಣ ಕಥೆ ಮುಕ್ತಾಯವಾಗುತ್ತದೆ. ಇದು ಕಾಳಿದಾಸನ 'ಕುಮಾರ ಸಂಭವ' ಕಾವ್ಯಕ್ಕೆ ಋಣಿಯಾಗಿದ್ದರೂ ಹರಿಹರ ಕುಮಾರನ ಸಂಭವದ ಕಥೆಯನ್ನು ಹೇಳುವುದಿಲ್ಲ. ಕುಮಾರನ ಹುಟ್ಟು ಆಗಬೇಕಾಗಿರುವುದು ತಾರಕಾಸುರನ ವಧೆಗಾಗಿ. ಸಂತ ಹರಿಹರನಿಗೆ ಯುದ್ಧ ಸಂಗತಿಗಳೇ ಬೇಕಿಲ್ಲ. ಅವನ ಕಾವ್ಯ ಪಾತ್ರಗಳೆಲ್ಲವೂ ಅನ್ನ, ಬಟ್ಟೆ ಹುಟ್ಟಿಸಲು ಬಡಿದಾಡುವಂಥವು. 'ಇಳೆಯಾಂಡ ಗುಡಿಮಾರ' ಮತ್ತು 'ಅಮರನೀತಿಗಳ ರಗಳೆ'ಯಲ್ಲಿ ಇದರ ಬೇಡಿಕೆಯ ವಿವರಗಳನ್ನು ಕಾಣಬಹುದು. ಬಡ ಭಕ್ತರ ಪ್ರತಿನಿಧಿಯಾಗಿ ಇದನ್ನು ಬೇಡುವವನು ಶಿವನೇ.

ಹರಿಹರನ ಲೋಕೋದ್ಧಾರ, ಲೋಕ ಸಮಾನತೆಯ ಆಶಯಗಳ ರಗಳೆಗಳಲ್ಲಿ ಅತ್ಯುತ್ಕೃಷ್ಟವೆಂದರೆ ಮಾದರ ಚೆನ್ನಯ್ಯನ ಕಥೆ. ಇದನ್ನು ಕುರಿತು ಎಚ್. ದೇವಿರಪ್ಪನವರು ಈ ಮಾದರಿಯ ಕಥನವನ್ನು ಹರಿಹರನಿಗಿಂತಲೂ ಮೊದಲು ಯಾರೂ ಯಾವ ಭಾಷೆಯಲ್ಲೂ ರಚಿಸಿಲ್ಲ, ಇದರ ಸುಳಿವು ಬೇರೆಲ್ಲಿಯೂ ಕಾಣುವುದಿಲ್ಲವೆಂದು ಬಸವಣ್ಣನವರ ವಚನಗಳನ್ನೇ ಆಧರಿಸಿ ಹರಿಹರ ಮಾದರ ಚೆನ್ನಯ್ಯನ ಕಥಾ ರಚನೆ ಮಾಡಿರಬೇಕೆಂದು ಹೇಳುತ್ತಾರೆ. ಬಸವಣ್ಣನವರು ಎಷ್ಟು ಬಾರಿ ಮಾದರ ಚೆನ್ನನನ್ನು ಸ್ಮರಿಸಿದ್ದಾರೆಂಬುದನ್ನು ಲೆಕ್ಕ ಹಾಕಿ ಅದನ್ನೇ ಹರಿಹರನ ಕಥಾ ರಚನೆಗೆ ಸಾಕ್ಷಿಯಾಗಿಸಿದ್ದಾರೆ.

ಅರಸನ ಭಕ್ತಿ, ಐಶ್ವರ್ಯ, ವೈಭವ, ಕೈಗೊಳ್ಳುವ ಸಾಹಸ ಎಲ್ಲವೂ ಪ್ರದರ್ಶನಕ್ಕಿರುವಂಥವು. ಪ್ರಜೆಗಳು ಅದನ್ನು ಕಂಡು ಮೆಚ್ಚಬೇಕು, ಕೈವಾರಿಸಬೇಕು. ಇಂಥದೊಂದು ಪ್ರದರ್ಶನಪೂಜೆಯನ್ನು ಒಂದು ಬದಿಯಲ್ಲಿಟ್ಟು ಮತ್ತೊಂದು ದಿಕ್ಕಿನಲ್ಲಿ ಅಸ್ಪೃಶ್ಯರ ಬೀದಿಯ ಕಡೆಗೆ ಹರಿಹರ ಕಣ್ಣು ಹೊರಳಿಸುತ್ತಾನೆ. ಈ ಗುಡಿಸಲ ಸಮೂಹದ ಕೇರಿಗೆ ಯಾರಾದರೂ ಕಾಲಿಡುವುದುಂಟೇ. ಇಲ್ಲಿರುವ ಮಾದರ ಚೆನ್ನಯ್ಯನ ಭಕ್ತಿಗೆ, ಕಾಯಕಕ್ಕೆ ಯಾವ ಗೌರವವಿದೆ? ಆದರೆ, ಹರಿಹರ ಚೋಳ ಅರಸನ